# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಫೋನ್ ನಂ: 0821 – 2417106
ಫ್ಯಾಕ್ಸ್ ನಂ: 0821 – 2417105
e-mail:cscesc@cescmysore.org
CIN:U40109KA2004SGCO35177

ನಿಗಮ ಕಾರ್ಯಾಲಯ,
ನಂ.29, ವಿಜಯ ನಗರ 2ನೇ ಹಂತ,
ಹಿನಕಲ್, ಮೈಸೂರು.570017.


ಕ್ರಮಾಂಕ: ಪ್ರವ್ಯ(ಆ ಮತ್ತು ಮಾಸಂ)/ಸಿ.ಎಸ್/ಸ/2020–21/ 10084          ದಿನಾಂಕ: - 7 SEP 2020

## ಪತ್ರಿಕಾ ಪ್ರಕಟಣೆ

**ವಿಷಯ:–** ರಾಷ್ಟ್ರೀಯ ವೃತ್ತಿ ಶಿಶಿಕ್ಷು (ಅಂಪ್ರೆಟಿಸ್) ತರಬೇತಿ ಯೋಜನೆಯಡಿ 2020–21ನೇ ಸಾಲಿಗೆ ಶಿಶಿಕ್ಷು ತರಬೇತಿಗೆ ಅರ್ಹ ಅಭ್ಯರ್ಥಿಗಳ ಆಯ್ಕೆ ಬಗ್ಗೆ.

2020–21ನೇ ಸಾಲಿಗೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರುರವರ ವತಿಯಿಂದ ಶಿಶಿಕ್ಷು ಕಾಯ್ದೆ, 1961ರ ಪ್ರಕಾರ ಎಲೆಕ್ಟ್ರೀಷಿಯನ್ ವೃತ್ತಿಯಲ್ಲಿ ಶಿಶಿಕ್ಷು (ಅಂಪ್ರೆಟಿಸ್) ತರಬೇತಿಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಬಗ್ಗೆ ಪ್ರಕಟಣೆ.

ಅರ್ಹ ಅಭ್ಯರ್ಥಿಗಳು ಎಲ್ಲಾ ಮೂಲ ದಾಖಲಾತಿಗಳೊಂದಿಗೆ ದಿನಾಂಕ: 01.10.2020 ರಂದು ಬೆಳಿಗ್ಗೆ 11.00 ಗಂಟೆಗೆ ಕೆಳಕಂಡ ಆಯ್ಕೆ ಸಮಿತಿ ಮುಂದೆ ಹಾಜರಾಗಲು ತಿಳಿಸಲಾಗಿದೆ. ಈ ಬಗ್ಗೆ ಪ್ರತ್ಯೇಕ ಸಂದರ್ಶನ ಪತ್ರ ಕಳುಹಿಸಲಾಗುವುದಿಲ್ಲ.

| ಕ್ರ. ಸಂ | ವೃತ್ತಿ ವ್ಯಾಪ್ತಿ | ತರಬೇತಿಗೆ ಬೇಕಾಗಿರುವ ಶಿಶಿಕ್ಷುಗಳ ಸಂಖ್ಯೆ | ನೇರ ಸಂದರ್ಶನಕ್ಕಾಗಿ ಹಾಜರಾಗಬೇಕಾದ ಸ್ಥಳ |
|---|---|---|---|
| 1 | ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮೈಸೂರು. | 100 | ಅಧೀಕ್ಷಕ ಇಂಜಿನಿಯರ್(ವಿ) ರವರ ಕಛೇರಿ, ಕಾ ಮತ್ತು ಪಾ ವೃತ್ತ, ಜೋಡಿ ಬಸವೇಶ್ವರ ರಸ್ತೆ, ಕುವೆಂಪುನಗರ, ಮೈಸೂರು (ಮೈಸೂರು ಜಿಲ್ಲೆಗಳಿಗೆ ಒಳಪಡುವ ಶಿಶಿಕ್ಷುಗಳು) |
| 2 | ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾಮರಾಜನಗರ ಮತ್ತು ಕೊಡಗು. | 100 | ಅಧೀಕ್ಷಕ ಇಂಜಿನಿಯರ್(ವಿ) ರವರ ಕಛೇರಿ, ಕಾ ಮತ್ತು ಪಾ ವೃತ್ತ, ಶ್ರೀ. ಹರ್ಷ ರಸ್ತೆ ಮೈಸೂರು (ಚಾಮರಾಜನಗರ ಹಾಗೂ ಮಡಿಕೇರಿ ಜಿಲ್ಲೆಗೆ ಒಳಪಡುವ ಶಿಶಿಕ್ಷುಗಳು) |
| 3 | ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯ. | 100 | ಅಧೀಕ್ಷಕ ಇಂಜಿನಿಯರ್(ವಿ) ರವರ ಕಛೇರಿ, ಕಾ ಮತ್ತು ಪಾ ವೃತ್ತ, ಬೆಂಗಳೂರು–ಮೈಸೂರು ರಸ್ತೆ, ಮಂಡ್ಯ (ಮಂಡ್ಯ ಜಿಲ್ಲೆಗೆ ಒಳಪಡುವ ಶಿಶಿಕ್ಷುಗಳು) |
| 4 | ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಹಾಸನ. | 99 | ಅಧೀಕ್ಷಕ ಇಂಜಿನಿಯರ್(ವಿ) ರವರ ಕಛೇರಿ, ಕಾ ಮತ್ತು ಪಾ ವೃತ್ತ, ಸಂತೆಪೇಟೆ, ಬಿ.ಎಂ. ರಸ್ತೆ, ಹಾಸನ (ಹಾಸನ ಜಿಲ್ಲೆಗೆ ಒಳಪಡುವ ಶಿಕ್ಷುಗಳು) |
| | ಒಟ್ಟು | 399 | |

**ವಿದ್ಯಾರ್ಹತೆ:** ಎಸ್.ಎಸ್.ಎಲ್.ಸಿ ನಂತರ ಎರಡು ವರ್ಷ ಅವಧಿಯ ಐಟಿಐ ತರಬೇತಿ ಹೊಂದಿ, ಕುಶಲ ಕರ್ಮಿ ತರಬೇತಿ ಯೋಜನೆಯಡಿ ನಡೆಸುವ ವೃತ್ತಿ ಪರೀಕ್ಷೆಯ ಎಲೆಕ್ಟ್ರೀಷಿಯನ್ ವೃತ್ತಿಯಲ್ಲಿ ತೇರ್ಗಡೆಯಾಗಿ ರಾಷ್ಟ್ರೀಯ ವೃತ್ತಿ ಪ್ರಮಾಣ ಪತ್ರ (ಎನ್.ಸಿ.ವಿ.ಟಿ) ಅಂಕಪಟ್ಟಿ ಹೊಂದಿರುವ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ.

ಮು.ತಿ.ನೋ.

- ಅಭ್ಯರ್ಥಿಯು www.apprenticeshipindia.org ವೆಬ್‌ಸೈಟ್‌ನಲ್ಲಿ ನೋಂದಾಯಿಸಿರಬೇಕು ಮತ್ತು ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ಅರ್ಜಿ ನಮೂನೆಯಲ್ಲಿ ನಮೂದಿಸಿರಬೇಕು. ಇಲ್ಲವಾದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುತ್ತದೆ.

**ಶಿಶಿಕ್ಷು (ಅಂಪ್ರೆಟಿಸ್) ತರಬೇತಿ ಅವಧಿ:** ರಾಷ್ಟ್ರೀಯ ವೃತ್ತಿ ಪ್ರಮಾಣ ಪತ್ರ (ಎನ್.ಸಿ.ವಿ.ಟಿ) ಹೊಂದಿರುವ ಅಭ್ಯರ್ಥಿಗಳಿಗೆ ಹಾಗೂ ರಾಜ್ಯ ವೃತ್ತಿ ಪ್ರಮಾಣ ಪತ್ರ (ಎನ್.ಸಿ.ವಿ.ಟಿ) ಹೊಂದಿರುವ ಅಭ್ಯರ್ಥಿಗಳಿಗೂ ಒಂದು ವರ್ಷ.

**ಶಿಶಿಕ್ಷು ವೇತನ:** ತರಬೇತಿ ಅವಧಿಯಲ್ಲಿ ಮಾಹೆಯಾನ ಕಾ ಮತ್ತು ಪಾ ವೃತ್ತ, ಮೈಸೂರು ರೂ. 10,925/- ಮತ್ತು ಕಾ ಮತ್ತು ಪಾ ವೃತ್ತ, ಚಾಮರಾಜನಗರ ಮತ್ತು ಕೊಡಗು, ಮಂಡ್ಯ ಮತ್ತು ಹಾಸನ ರೂ. 10351/-ಕ್ಕೆ ನಿಗಧಿ ಪಡಿಸಲಾಗಿದೆ.

**ಅಭ್ಯರ್ಥಿಯ ವಯಸ್ಸು:** ದಿನಾಂಕ: 01.10.2020 ಕ್ಕೆ 25 ವರ್ಷ ಮೀರಿರಬಾರದು. ಪರಿಶಿಷ್ಟ ಜಾತಿ/ಪಂಗಡದ ಅಭ್ಯಥಿಗಳ ವಯಸ್ಸು ದಿನಾಂಕ: 01.10.2020 ಕ್ಕೆ 30 ವರ್ಷಕ್ಕಿಂತ ಮೀರಿರಬಾರದು.

**ಮೀಸಲಾತಿ:** ಪರಿಶಿಷ್ಟ ಜಾತಿ-15% ಪರಿಶಿಷ್ಟ ಪಂಗಡ-3% ಮತ್ತು ಮಹಿಳೆಯರು-33% ಉಳಿದಂತೆ ಹಿಂದುಳಿದ ವರ್ಗ, ಸಾಮಾನ್ಯ ವರ್ಗ ಹಾಗೂ ವಿಕಲ ಚೇತನರುಗಳಿಗೆ ಆಧ್ಯತೆ ನೀಡಲಾಗುವುದು.

**ಅರ್ಜಿ ಸಲ್ಲಿಸುವ ವಿಧಾನ:** ಈ ಜಾಹೀರಾತಿನಲ್ಲಿ ತಿಳಿಸಿರುವಂತೆ ನಿಗಧಿತ ಅರ್ಜಿ ನಮೂನೆಯನ್ನು ನಿಗಮದ ವೆಬ್‌ಸೈಟ್‌ನಿಂದ ಪಡೆದು ಅಭ್ಯರ್ಥಿಗಳು ಅರ್ಜಿ ಮತ್ತು ಸೂಚಿತ ದಾಖಲೆಗಳೊಂದಿಗೆ ಮೇಲಿನ ಸ್ಥಳದಲ್ಲಿ ನೇರ ಸಂದರ್ಶನಕ್ಕೆ ಹಾಜರಾಗುವುದು.

- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ಪ್ರತಿ
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಕುಶಲಕರ್ಮಿ ಎಲೆಕ್ಟ್ರೀಷಿಯನ್ ವೃತ್ತಿ ಪರೀಕ್ಷೆಯ ಅಂಕಪಟ್ಟಿಯ ಪ್ರತಿ
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಜಾತಿ ಪ್ರಮಾಣ ಪತ್ರದ ಪ್ರತಿ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮಾತ್ರ)
- ಸರ್ಕಾರಿ ಆಸ್ಪತ್ರೆಯ ಇತ್ತೀಚಿನ ವೈದ್ಯಕೀಯ ಪ್ರಮಾಣ ಪತ್ರ
- ಗಣ್ಯ ವ್ಯಕ್ತಿ/ಗೆಜೆಟೆಡ್ ಅಧಿಕಾರಿಗಳಿಂದ ಪಡೆದ ನಡತೆ ಪ್ರಮಾಣ ಪತ್ರ
- ಇತ್ತೀಚಿನ ಒಂದು ಭಾವಚಿತ್ರವನ್ನು ಅರ್ಜಿಗೆ ಲಗತ್ತಿಸಬೇಕು. (ಪಾಸ್ ಪೋರ್ಟ್ ಸೈಜಿನದು)
- ಅಭ್ಯರ್ಥಿಗಳು ತರಬೇತಿ ಹೊಂದಿದ ಐಟಿಐ/ಐಟಿಐ ಸಂಸ್ಥೆಯು ಎನ್.ಸಿ.ವಿ.ಟಿ ಭಾರತ ಸರ್ಕಾರದ ಮಾನ್ಯತೆ ಪಡೆದ ಪತ್ರದ ದೃಢೀಕೃತ ಪ್ರತಿಯನ್ನು ತರಬೇತಿ ಸಂಸ್ಥೆಯಿಂದ ಪಡೆದು ಸಲ್ಲಿಸುವುದು.

**ವಿಶೇಷ ಸೂಚನೆ:**

- ಈಗಾಗಲೇ ಶಿಶಿಕ್ಷು ಕಾಯ್ದೆ, 1961ರನ್ವಯ ಶಿಶಿಕ್ಷು ತರಬೇತಿ ಪಡೆದವರು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ.
- ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ತಮ್ಮ ತರಬೇತಿ ಮುಗಿಸಿದ ನಂತರ ಸಂಸ್ಥೆಯು ಅವರಿಗೆ ಕೆಲಸ ಒದಗಿಸುವ ಬಗ್ಗೆ ಯಾವುದೇ ಜವಾಬ್ದಾರಿ ಹೊಂದಿರುವುದಿಲ್ಲ.
- ತರಬೇತಿ ಪಡೆಯಲು ಆಯ್ಕೆಯಾದವರು ಶಿಶಿಕ್ಷು ಕಾಯ್ದೆ, 1961 ನಿಯಮಗಳ ನಿಬಂಧನೆ ಹಾಗೂ ಷರತ್ತುಗಳಿಗೆ ಒಳಪಟ್ಟಿರಬೇಕು.

ಮು.ತಿ.ನೋ.

- ಆಯ್ಕೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಶಿಫಾರಸ್ಸು ಅಥವಾ ಒತ್ತಡಗಳಿಗೆ ಆಸ್ಪದ ಇರುವುದಿಲ್ಲ. ನಿಗಮದ ತೀರ್ಮಾನವೇ ಅಂತಿಮವಾಗಿದ್ದು, ಈ ಬಗ್ಗೆ ಪತ್ರ ವ್ಯವಹಾರಕ್ಕೆ ಆಸ್ಪದವಿಲ್ಲ.
- ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳು ಊಟ/ವಸತಿ ಹಾಗೂ ಇತರ ವ್ಯವಸ್ಥೆಯನ್ನು ಸ್ವಂತ ಖರ್ಚಿನಲ್ಲಿ ಮಾಡತಕ್ಕದ್ದು.
- ಕನ್ನಡ ಭಾಷೆಯನ್ನು ಓದಲು ಮತ್ತು ಬರೆಯಲು ಬರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

**ಸೂಚನೆ**: ಅರ್ಜಿ ನಮೂನೆಯು **ವೆಬ್‌ಸೈಟ್**‌ನಲ್ಲಿ ಲಭ್ಯವಿರುತ್ತದೆ.
https://cescmysore.karnataka.gov.in/

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾಸಂ)
ಚಾವಿಸನಿನಿ, ಮೈಸೂರು

## ಅರ್ಜಿ ನಮೂನೆ

ಪ್ರಧಾನ ವ್ಯವಸ್ಥಾಪಕರು
(ಆ ಮತ್ತು ಮಾಸಂ),
ಚಾ.ವಿ.ಸ.ನಿ.ನಿ, ನಿಗಮ ಕಛೇರಿ,
ಮೈಸೂರು.

ಭಾವಚಿತ್ರ

**ಮಾನ್ಯರೆ,**

**ವಿಷಯ:** ಚಾ.ವಿ.ಸ.ನಿ.ನಿ., ಮೈಸೂರು ವತಿಯಿಂದ 2020–21ನೇ ಸಾಲಿನಲ್ಲಿ ಪ್ರಾರಂಭವಾಗುವ ಶಿಶಿಕ್ಷು ತರಬೇತಿಗೆ ಅರ್ಜಿ.

**ಉಲ್ಲೇಖ:** ಜಾಹೀರಾತು ಸಂಖ್ಯೆ:------------

| | | |
|---|---|---|
| 1 | ಅಭ್ಯರ್ಥಿಯ ಪೂರ್ಣ ಹೆಸರು | |
| 2 | ತಂದೆಯ ಹೆಸರು | |
| 3 | ಅಭ್ಯರ್ಥಿಯ ಪೂರ್ಣ ವಿಳಾಸ | |
| 4 | ವಯಸ್ಸು ಮತ್ತು ಜನ್ಮ ದಿನಾಂಕ (ಗೆಜೆಟೆಡ್ ಅಧಿಕಾರಿಯವರು ದೃಢೀಕರಿಸಿದ ಎಸ್.ಎಸ್.ಎಲ್.ಸಿ ಅಂಕ ಪಟ್ಟಿಯನ್ನು ಲಗತ್ತಿಸಬೇಕು) | |
| 5 | www.apprenticeshipindia.org ವೆಬ್‌ಸೈಟ್‌ನಲ್ಲಿ ಶಿಶಿಕ್ಷು ತರಬೇತಿಗೆ ನೋಂದಾಯಿಸಿರುವ ನೋಂದಣಿ ಸಂಖ್ಯೆ | |
| 6 | ಮೊಬೈಲ್ ನಂಬರ್ (ಚಾಲ್ತಿಯಲ್ಲಿರುವ ಹಾಗೂ ವೆಬ್‌ಸೈಟ್‌ನಲ್ಲಿ ಅರ್ಜಿ ನೋಂದಾಯಿಸುವಾಗ ನೀಡಿರುವ ಮೊಬೈಲ್ ನಂಬರನ್ನೇ ನಮೂದಿಸಬೇಕು) | |
| 7 | ಇ–ಮೇಲ್ ನಂಬರ್ (ಚಾಲ್ತಿಯಲ್ಲಿರುವ ಹಾಗೂ ವೆಬ್‌ಸೈಟ್‌ನಲ್ಲಿ ಅರ್ಜಿ ನೋಂದಾಯಿಸುವಾಗ ನೀಡಿರುವ ಇ–ಮೇಲ್ ನಂಬರನ್ನೇ ನಮೂದಿಸಬೇಕು) | |
| 8 | ವಿದ್ಯಾರ್ಹತೆ (ಅಭ್ಯಾಸ ಮಾಡಿದ ವಿಷಯಗಳ ಬಗ್ಗೆ ಗೆಜೆಟೆಡ್ ಅಧಿಕಾರಿಯವರು ದೃಢಿಕರಿಸಿದ ಪ್ರಮಾಣ ಪತ್ರ ಲಗತ್ತಿಸಬೇಕು) | |
| 9 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ವರ್ಗ (ಗೆಜೆಟೆಡ್ ಅಧಿಕಾರಿಯ ವರು ದೃಢೀಕರಿಸಿದ ಪ್ರಮಾಣ ಪತ್ರ ಲಗತ್ತಿಸ ಬೇಕು) | |
| 10 | ನಿಮ್ಮ ಸಂಬಂಧಿಕರು ಯಾರಾದರೂ ಚಾ.ವಿ.ಸ.ನಿ.ನಿ., ಯಲ್ಲಿ ಉದ್ಯೋಗದಲ್ಲಿ ಇರುವರೇ? ಹಾಗಿದ್ದಲ್ಲಿ | ಅ) ಅವರ ಹೆಸರು :<br>ಆ) ಹುದ್ದೆ :<br>ಇ) ಸಂಬಂಧ : |

ಪು.ತಿ.ನೋ.

| | | |
|---|---|---|
| 11 | ಕನ್ನಡ ಪರಿಜ್ಞಾನದ ಬಗ್ಗೆ (ಟಿಕ್ ಮಾಡತಕ್ಕದ್ದು) | ಅ) ಓದಲು<br>ಆ) ಬರೆಯಲು<br>ಇ) ಮಾತನಾಡಲು |
| 12 | ಪರೀಕ್ಷೆಯಲ್ಲಿ ಪಡೆದ ಅಂಕಗಳು | ಐ.ಟಿ.ಐ ಗರಿಷ್ಟ --------- ಕನಿಷ್ಟ------- |

ಈ ಮೇಲೆ ತಿಳಿಸಿದ ವಿವರಗಳು ಸತ್ಯವಿದೆ ಎಂದು ಪ್ರಮಾಣ ಮಾಡುತ್ತೇನೆ. ಒಂದು ವೇಳೆ ಅಸತ್ಯವೆಂದು ಕಂಡುಬಂದಲ್ಲಿ ನನ್ನ ಮೇಲೆ ಕಾನೂನು ಕ್ರಮ ಜರುಗಿಸಬಹುದೆಂದು ಒಪ್ಪುತ್ತೇನೆ.

ದಿನಾಂಕ:

ಸ್ಥಳ :

(ಅಭ್ಯರ್ಥಿಯ ಸಹಿ)